[Govt. of Karnataka C.R.P. 67]

| |
|---|
| **Deposition Sheets (RP.No.57) Form No.4 (Civil)** |

**IN THE COURT OF CIVIL JUDGE & J.M.F.C., KARKALA.**

**Criminal Case No. 458-2009**

**..................................................Vs....................................**

ಸಾಕ್ಷಿದಾರನ ಹೆಸರು : ರಾಮಚಂದ್ರ ಆಚಾರ್ಯ ಪಿ.ಡಬ್ಲ್ಯೂ: 1

ತಂದೆಯ ಹೆಸರು: ಅನಂತಯ್ಯ ಆಚಾರ್ಯ ಸಿ.ಡಬ್ಲ್ಯೂ: 1

ಪ್ರಾಯ : 64 ವರ್ಷ

ಉದ್ಯೋಗ : ನಿವೃತ್ತ ಅಧಿಕಾರಿ

ವಾಸ : ಸಾಣೂರು, ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿ: 12-11-2020

**ದಂ ಪ್ರ ಸಂ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆ**

ನಾನು 2001 ರಲ್ಲಿ ಕಾರ್ಕಳ ಆನೆಕೆರೆಯ ಬಳಿ ಚಿನ್ನ, ಬೆಳ್ಳಿ ಅಂಗಡಿಯನ್ನು ತೆರೆದಿದ್ದೆ.

2. ಸುಮಾರು 17 ವರ್ಷಗಳ ಹಿಂದೆ ಸದರಿ ನನ್ನ ಅಂಗಡಿಯಲ್ಲಿ 6 ಕೆ.ಜಿ. ಬೆಳ್ಳಿ, ಒಡವೆ ಕಳುವಾಗಿದ್ದವು. ಅವುಗಳನ್ನು ಅಂಗಡಿಯ ಶೋಕೇಸ್‌ನಲ್ಲಿ ಇಟ್ಟು ರಾತ್ರಿ 8.00 ಗಂಟೆಗೆ ಅಂಗಡಿಗೆ ಬೀಗ ಹಾಕಿ ಮನೆಗೆ ಹೋಗಿದ್ದೆ. ಮರುದಿನ ಬೆಳಿಗ್ಗೆ ಯಾರೋ ಫೋನ್ ಮಾಡಿ ಅಂಗಡಿಯ ಶಟ್ಟರ್ ಪುಡಿ ಮಾಡಿದ್ದಾರೆಂದು ತಿಳಿಸಿರುತ್ತಾರೆ. ನಾನು ಕೂಡಲೇ ಅಂಗಡಿ ಬಳಿ ಹೋಗಿ ನೋಡಿದಾಗ ಬೆಳ್ಳಿ ಕಾಲುಚೈನು, ಕಾಲುಂಗುರ, ಕರಿಮಣಿ ಕಳುವಾಗಿದ್ದವು. ಅವುಗಳ ಒಟ್ಟು ತೂಕ 6 ಕೆಜಿಯಾಗಿತ್ತು. ನಂತರ ಪೋಲಿಸರಿಗೆ ದೂರು ನೀಡಿರುತ್ತೇನೆ. ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಎಂದು, ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ನಂತರ ಪೋಲಿಸರು ಅಂಗಡಿಯ ಬಳಿ ಬಂದು ಮಹಜರು ಮಾಡಿ ಸದರಿ ಮಹಜರಿಗೆ ನನ್ನ ಸಹಿ ಪಡೆದಿರುತ್ತಾರೆ. ಮಹಜರು ಸಮಯದಲ್ಲಿ ಪೋಲಿಸರು ಎರಡು ಬೀಗಗಳನ್ನು ಅಮಾನತು ಪಡಿಸಿರುತ್ತಾರೆ. ಸ್ಥಳ ಮಹಜರನ್ನು ನಿಪಿ-2 ಎಂದು, ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

4. ದಿಃ 04-11-2003 ರಂದು ಯಲಹಂಕ ಪೋಲಿಸ್ ಠಾಣಾಧಿಕಾರಿಯರು ತಮ್ಮ ಠಾಣೆಯ ಕಳುವು ಕೇಸಲ್ಲಿ ದಸ್ತಗಿರಿಯಾಗಿದ್ದ ಆರೋಪಿತರನ್ನು ಕಾರ್ಕಳಕ್ಕೆ ಕರೆದುಕೊಂಡು ಬಂದು ಆರೋಪಿತರಾದ ಮುರುಗೇಶ್ ಮತ್ತು ಖಾಜಾ ಹುಸೇನ್ ಇವರು ಇತರ ಆರೋಪಿತರೊಂದಿಗೆ ಸೇರಿ ನನ್ನ ಅಂಗಡಿಯಲ್ಲಿ ಕಳ್ಳತನ ಮಾಡಿರುವುದಾಗಿ ಸ್ವಇಚ್ಛಾ ಹೇಳಿಕೆ ನೀಡಿದ್ದು, ಸದರಿ ಕಳುವಾದ ಬೆಳ್ಳಿಯ ಸಾಮಾನುಗಳನ್ನು ಗುರುತಿಸುವಂತೆ ನನಗೆ ಹೇಳಿದ ಮೇರೆಗೆ ನಾನು ಸದರಿ ಸಾಮಾನುಗಳನ್ನು ಗುರುತಿಸಿ ಆರೋಪಿತರನ್ನು ಸಹ ಗುರುತಿಸಿ ಮರುಹೇಳಿಕೆ ನೀಡಿರುತ್ತೇನೆ. ಸದರಿ ಮರು ಹೇಳಿಕೆಯನ್ನು ನಿಪಿ-3 ಎಂದು, ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

5. ನಂತರ ದಿಃ 03-03-2004 ರಂದು ನಾನು ಕಾರ್ಕಳ ನಗರ ಪೋಲಿಸ್ ಠಾಣೆಯ ಅಧಿಕಾರಿಗಳೊಂದಿಗೆ ಯಲಹಂಕ ಪೋಲಿಸ್ ಠಾಣೆ, ಬೆಂಗಳೂರು ಇಲ್ಲಿಗೆ ಹೋಗಿದ್ದು, ಅಲ್ಲಿ ಪೋಲಿಸರು ನನಗೆ ಆರೋಪಿತರಾದ ಮುರುಗೇಶ್ ಮತ್ತು ಖಾಜಾ ಹುಸೇನ್ ಹಾಗೂ ಇತರರನ್ನು ತೋರಿಸಿರುತ್ತಾರೆ. ನಾನು ಅವರನ್ನು ನೋಡಿ ಗುರುತಿಸಿದ್ದು, ದಿಃ 24-10-2003 ರಂದು ನನ್ನ ಅಂಗಡಿಯಲ್ಲಿ 5 ಕೆಜಿ ಬೆಳ್ಳಿ ಆಭರಣ ಕಳುವು ಆಗಿರುವ ಬಗ್ಗೆ ದೂರು ನೀಡಿದ್ದು, ನಂತರ ಅದನ್ನು ಸರಿಯಾಗಿ ಪರಿಶೀಲಿಸಿದಾಗ 6 ಕೆಜಿ ಬೆಳ್ಳಿ ಆಭರಣಗಳು ಕಳುವಾದ ಬಗ್ಗೆ ತಿಳಿದುಬಂತು. ಅದರಂತೆ ಮರುಹೇಳಿಕೆ ನೀಡಿದ್ದು, ಅದನ್ನು ನಿಪಿ- ಎಂದು, ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬೆಳ್ಳಿಯ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನ್ಯಾಯಾಲಯದ ಆದೇಶದ ಮೇರೆಗೆ ಮಧ್ಯಂತರ ಸುಪರ್ದಿಗೆ ಪಡೆದಿರುತ್ತೇನೆ.

ಆರೋಪಿತರು ತಲೆ ಮರೆಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ